ಕಥೆ,ಕಾದಂಬರಿ ಮತ್ತು ಕೃಷಿ ಕ್ಷೇತ್ರದ ವ್ಯವಸಾಯಗಾರರಾಗಿ ಗುರುತಿಸಿಕೊಂಡ ಹಾಡ್ಲಹಳ್ಳಿ ನಾಗರಾಜ್ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹಾಡ್ಲಹಳ್ಳಿಯವರು. ಎನ್.ಸಿ.ಸಿ ಇಲಾಖೆಯಲ್ಲಿ 36 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ನಂತರ ಅದೇ ಇಲಾಖೆಯಲ್ಲಿ ಗೆಜೆಟೆಡ್ ಅಧಿಕಾರಿಯಾಗಿ ನಿವೃತ್ತಿ ಹೊಂದಿದ್ದಾರೆ. 'ದೇವರಬೆಟ್ಟ', 'ಗುದ್ದಿನಿಂದ ತೆಗೆದ ಹೆಣ', 'ನಕ್ರ ಹಾಗೂ ನಾನು', 'ಕುಂಭದ್ರೋಣ' ಕಥಾಸಂಕಲನಗಳು, 'ಬಾಡಿಗೆಬಂಟರು', 'ಬಿಂಗಾರೆಕಲ್ಲು', 'ಬೆಂಕಿಯಸುಳಿ', 'ಗೃಹ ಪುರಾಣ', 'ಕಡವೆಬೇಟೆ', 'ನಿಲುವಂಗಿಯ ಕನಸು' ಕಾದಂಬರಿಗಳು ಪ್ರಕಟವಾಗಿವೆ. 'ಕಾಡುಹಕ್ಕಿಯ ಹಾದಿನೋಟ' ಆತ್ಮಕಥನ ಸ್ವರೂಪದ ಪ್ರಬಂಧ ಸಂಕಲನ. ಹೊಯ್ಸಳ ಕಲಾಸಂಘ ಎಂಬ ಸಾಂಸ್ಕೃತಿಕ ಸಂಘಟನೆಯ ರೂವಾರಿ.

ಮಾಡಿದ್ದರಿಂದ ಮಗು ಕಿಟಾರನೆ ಕಿರುಚುತ್ತಿತ್ತು. ಅದನ್ನು ಬಾಣಂತಿಯ ಪಕ್ಕಕ್ಕೆ ಮಲಗಿಸಿ ತಾಯಿಯ ಮೊಲೆತೊಟ್ಟನ್ನು ಅದರ ಬಾಯಲ್ಲಿಟ್ಟು ಕೌದಿ ಹೊದಿಸಿದರು. ಚಾಪೆಯ ಸುತ್ತ ಇರುವೆ ಔಷಧಿ ಪುಡಿ ಚಿಮುಕಿಸಿ ಬಾಣಂತಿಗೆ ಹೊಟ್ಟೆಗೆ ಏನಾದರೂ ಕಳಿಸುವುದಾಗಿ ಹೇಳಿ ಆಳಿನೊಂದಿಗೆ ಊರ ದಾರಿ ಹಿಡಿದಿದ್ದರು.

ಮರುದಿನ ಬೆಳಗ್ಗೆ ಅವರು ಮತ್ತೆ ಬರುವಷ್ಟರಲ್ಲಿ ಹಸುಗೂಸು ಕಣ್ಮುಚ್ಚಿಕೊಂಡಿತ್ತು. ಗದ್ದೆಯ ಗೊಸರನ್ನು ದೊಗೆದು ಸತ್ತ ಮಗುವನ್ನು ಮಣ್ಣು ಮಾಡುವಂತೆ ಹೇಳಿ ಗೌಡತಿ ಅಲ್ಲಿ ನಿಲ್ಲದೆ ಹೊರಟು ಹೋದರು.

ಗೌಡತಿ ಕಳಿಸಿದ ಹಾಲು, ಗಂಜಿಯನ್ನು ಬೆಳಗ್ಗೆ ಸಂಜೆ ಬಾಣಂತಿಯ ಮುಂದಿರಿಸಿ ಬರುತ್ತಿದ್ದ ದುಮ್ಮ, ನಾಲ್ಕನೆಯ ದಿನ ಬೆಳಗ್ಗೆ ಹೋಗಿ ನೋಡಿದಾಗ ಅಲ್ಲಿ ಅಕ್ಕಣಿ ಇರಲಿಲ್ಲ. ಚಾಪೆ ಹಾಗೂ ಕೌದಿ ಅನಾಥವಾಗಿ ಬಿದ್ದಿದ್ದವು.

ಗೌಡತಿ ಆ ಕಡೆ ಬರುವುದನ್ನು ನಿಲ್ಲಿಸಿದರು.

'ಹುಡುಗಿ ಜೀವಕ್ಕೆ ಏನೋ ಮಾಡಿಕೊಂಡಿರಬಹುದು' ಎಂದು ಶಂಕಿಸಿದರು ಕೆಲವರು.

'ಎಲ್ಲವೂ ಮರೆತುಹೋಗಲಿ' ಎಂದು ಗೌಡರೇ ಎಲ್ಲೋ ದೂರ ಬಿಟ್ಟು ಬಂದಿರಬಹುದೆಂದು ಕೆಲವರು ಪಿಸುಗುಟ್ಟಿಕೊಂಡರು.

ಗೌಡತಿ ಅವಳ ಬಂಧುಗಳ ಮೂಲವನ್ನು ಕಂಡು ಹಿಡಿದು, ಆಳಿನ ಜೊತೆ ಮಾಡಿ ಕನ್ನಡ ಜಿಲ್ಲೆಗೆ ಕಳಿಸಿರಬಹುದೆಂದು ಹಲವರು ಮಾತಾಡಿಕೊಂಡರು.

ಕ್ರಮೇಣ ಕಾಲ ಎಲ್ಲವನ್ನು ಮರೆಸಿತು. ದುಮ್ಮ ಒಂಟಿ ಜೀವನಕ್ಕೆ ಒಗ್ಗಿಕೊಂಡಿದ್ದ.

ಹಸಿವನ್ನು ಬೇಕಾದರೆ ದಿನಗಟ್ಟಲೆ ಹತ್ತಿಕ್ಕಬಹುದು. ಆದರೆ, ಮಲ ಮೂತ್ರ ಬಾಧೆಯನ್ನು ಕ್ಷಣಕಾಲವೂ ನಿಗ್ರಹಿಸುವುದು ಸಾಧ್ಯವೇ!

ದುಮ್ಮನಿಗೆ ಅದರ ಕಠೋರತೆಯ ಅನುಭವವಾಗತೊಡಗಿತ್ತು. ಇದೆಂತಹಾ ನರಕ ಯಾತನೆ? ಈ ಜಾತಿಗಳನ್ನು ಸೃಷ್ಟಿ ಮಾಡಿದವರಾದರೂ ಯಾರು? ಈ ದೇವರಿಗಾದರೂ ನಮ್ಮ ಕೀಳು ಜಾತಿಯವರ ಮೇಲೆ ಯಾಕಿಷ್ಟು ಸಿಟ್ಟು? ದುಮ್ಮ ತನ್ನ ಕಷ್ಟಕ್ಕೆ ಕಾರಣ ಹುಡುಕಲು ತನಗೇ ತಿಳಿದ ರೀತಿಯಲ್ಲಿ ಯೋಚಿಸಿದ.

ನಮ್ಮೊಂದಿಗೆ ಒಡನಾಡುವ ಈ ಜನರಾದರೂ ನಮ್ಮ ಮೇಲೆ ಯಾಕಿಷ್ಟು ತಾರತಮ್ಯ ಭಾವನೆ ತೋರಿ ಹಿಂಸೆಗೊಳಪಡಿಸಬೇಕು...

ನಾವು ತಯಾರಿಸುವ ಸೇಂದಿ, ಮೀನು, ಮಾಂಸ ಸಂಗ್ರಹಿಸುವ ಕಾಡುತ್ಪತ್ತಿ, ಅಣಬೆಗಳು, ಜೇನುತುಪ್ಪ ಇವುಗಳ ಸೇವನೆಯಿಂದ ಅವರಿಗೇನೂ ತೊಂದರೆಯಾಗದು. ಅಷ್ಟೇ ಏಕೆ, ನಮ್ಮ ಹೆಣ್ಣುಗಳನ್ನು ಹರಿದು ತಿನ್ನುವುದರಿಂದ ಅವರಿಗೆ ಕೇಡೆನಿಸುವುದಿಲ್ಲ. ಆದರೆ, ನಮ್ಮ ಮುಖ ನೋಡಿ ದೇವರ ಪೂಜೆಗೆ ಹೋಗುವುದರಿಂದ ಏಕೆ ಕೇಡಾಗಬೇಕು?

ಇದೆಲ್ಲಾ ಅವರಿಗೆ ಅರ್ಥಆಗುವುದಿಲ್ಲವೆ?

ಇಲ್ಲ... ಆ ಹೋಬಳಿಯಲ್ಲಿ ಕುಳಿತು ಇವರನ್ನೆಲ್ಲಾ ಸೂತ್ರದ ಗೊಂಬೆಗಳಂತೆ ಆಡಿಸುವ ಆ ಒಬ್ಬನೇ ಒಬ್ಬ ಪುರೋಹಿತನ ಹುನ್ನಾರವೆ?

ದುಮ್ಮ ಹೊಟ್ಟೆಯ ಬಾಧೆ ಅನುಭವಿಸುತ್ತಲೇ, ಯೋಚಿಸತೊಡಗಿದ.

